## ಕಳೆದ ಸಂಚಿಕೆಯಲ್ಲಿ



ತಮ್ಮ ಭಾಷಣವೊಂದು ಪತ್ರಿಕೆಯಲ್ಲಿ ಪ್ರಕಟಗೊಂಡು, ಅದರ ಬಗ್ಗೆ ಫೋನ್ ಮೂಲಕ ಬರುತ್ತಿದ್ದ ಮೆಚ್ಚುಗೆಗಳನ್ನು ಶ್ರೀನಿವಾಸರಾಯರು ಸವಿಯತೊಡಗಿದರು. ಅದೇ ಸಮಯಕ್ಕೆ ಬಂದ ಜಯಂತಿ ಕುಲಕರ್ಣಿ ಅವರ ಪತ್ರ ರಾಯರಲ್ಲಿ ಹಲವು ಭಾವಗಳನ್ನು ಮೂಡಿಸಿತು. ಜಯಂತಿ ರಾಂಪುರದ ಕಾಲೇಜಿನಲ್ಲಿ ಸಹೋದ್ಯೋಗಿ ಆಗಿದ್ದವರು. ಆಕೆಯಿಂದ ಬಂದ ಪತ್ರವನ್ನು ರಾಯರು ಪತ್ನಿಯಿಂದ ಮುಚ್ಚಿಟ್ಟರು. ಆ ಪತ್ರ ಪ್ರಸಂಗದ ಬೆನ್ನಿಗೆ ಇರುಳಿನಲ್ಲಿ ಅಪರಿಚಿತರಿಂದ ರಾಯರ ಕುಟುಂಬ ಆತಂಕ ಎದುರಿಸಬೇಕಾಯಿತು. ರಾಯರ ಭಾಷಣದ ಕೆಲವು ಅಂಶಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಗುಂಪು, ಅವರಿಗೆ ಎಚ್ಚರ ನೀಡುವ ಧಾಟಿಯಲ್ಲಿ ಮಾತನಾಡತೊಡಗಿತು. ಆ ಮಾತುಗಳಿಗೆ ಸೊಪ್ಪು ಹಾಕದ ರಾಯರು, ತಮ್ಮ ನಿಲುವನ್ನು ಸ್ಪಷ್ಟವಾಗಿ ಹೇಳಲು ಹಿಂಜರಿಯಲಿಲ್ಲ.

ಅಧ್ಯಕ್ಷರಿದ್ದಾರಲ್ಲ ಎಂ.ಎಸ್.ಪಾಟೀಲರು, ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ವಾರದ ಮ್ಯಾಗಜಿನ್‌ನಲ್ಲಿ ಒಮ್ಮೆ ನಾನು 'ಅಲ್ಲಮ ಮತ್ತು ಬುದ್ಧ' ಎಂದು ಬರೆದ ಲೇಖನವೊಂದಿ ನನ್ನನ್ನು ಮನೆಗೆ ಕರೆಸಿ, ತುಂಬಾ ಚೆನ್ನಾಗಿ ಬರೆದಿದ್ದೀರಿ ಮಿ. ರಾವ್, ಐ ಆಮ್ ವೆರಿಮಚ್ ಇಂಪ್ರೆಸ್ಡ್ ಬೈದಟ್ ಆರ್ಟಿಕಲ್ ಎಂದು ಅಭಿನಂದಿಸಿದ್ದರು. ಕನ್ನಡದಲ್ಲಿ ನೀವು ಹೆಚ್ಚು ಹೆಚ್ಚು ಬರೆಯಬೇಕು ಎಂಬ ಸಲಹೆ ನೀಡಿದ್ದರು. ಆದರೆ ಬರವಣಿಗೆ ಅನ್ನುವುದು ನನಗೆ ತುಂಬಾ ಉದಾಸೀನದ ಕೆಲಸ. ಬಟ್ ಸ್ಪೀಚ್ ಕೊಡೋದು ಅಂದರೆ ತುಂಬಾ ಇಷ್ಟ. ನನ್ನ ಭಾಷಣಗಳನ್ನು ರೆಕಾರ್ಡ್ ಮಾಡಿಸಿಕೊಳ್ಳಿ ಅಂದವರೂ ಇದ್ದಾರೆ. ಅದೇನು ಮಹಾ ಘನ ಕಾರ್ಯ ಅಂತ ನಾನು ಸುಮ್ಮನಿದ್ದೇನೆ. ಒಟ್ಟು ಇಪ್ಪತ್ಮೂರು ಇಪ್ಪತ್ತನಾಲ್ಕು ಲೇಖನಗಳನ್ನು ಈ ತನಕ ನಾನು ಬರೆದಿರಬಹುದು. ಇಂಗ್ಲಿಷ್‌ನಲ್ಲಿ ಸುಮಾರು ಹತ್ತರಷ್ಟು' ಎಂದು ಗಂಭೀರವಾಗಿಯೇ ಹೇಳಿ, 'ಮತ್ತೊಮ್ಮೆ ಅದೇ ಡೆಕ್ಕನ್ ಹೆರಾಲ್ಡ್‌ನಲ್ಲಿ ನಾನು ಬರೆದ ಬಸವಣ್ಣ ಮತ್ತು ಕಾರ್ಲ್‌ಮಾರ್ಕ್ಸ್ ಲೇಖನವೊಂದಿದ ಪಾಟೀಲರು ಆ ಲೇಖನ ಪ್ರಕಟವಾದ ಸಂಜೆಯೇ ನನ್ನನ್ನು ಅವರ ಮನೆಗೆ ಖುಶಿಯಿಂದ ಆಹ್ವಾನಿಸಿದ್ದರು. ಅವರಲ್ಲಿಗೆ ನಾನು ಹೋದಾಗ, ಅದ್ಭುತವಾಗಿದೆ ನಿಮ್ಮ ಲೇಖನ. ಎಷ್ಟಿವೆ ಹೇಳಿ ನಿಮ್ಮ ಇಂಥ ಲೇಖನಗಳು? ಎಂದು ವಿಚಾರಿಸಿದ್ದ ಅವರು, ಇನ್ನೂ ಒಂದಷ್ಟು ಬರೆಯಿರಿ. ನಾವೇ ಪ್ರಕಟಿಸೋಣವಂತೆ ಎಂದು ಹೇಳಿ, ಮಿ. ರಾವ್, ನಮ್ಮ ಕಾಲೇಜಿನಲ್ಲಿ ರಾಷ್ಟ್ರಮಟ್ಟದ ಕೆಲವು ಚಿಂತಕರ ಉಪನ್ಯಾಸಗಳನ್ನು ಯಾಕೆ ಏರ್ಪಡಿಸಬಾರದು ನಾವು? ಈಗಿರುವ ಕಾಲೇಜಿನ ಕನ್ನಡ ಸಂಘದಲ್ಲಿ ಇಂಥ ಕಾರ್ಯಕ್ರಮಗಳು ನಡೆಯುತ್ತಿಲ್ಲ ಅಂತ ಅಲ್ಲ. ಬಟ್ ಅವರಿಗೆ ಹೌ ಟು ಆರ್ಗನೈಸ್ ಅನ್ನೋದು ಗೊತ್ತಿದ್ದ ಹಾಗಿಲ್ಲ! ಎಂದಿದ್ದರು' ಎಂದರು.

ರಾಯರು ಪಾಟೀಲರ ಸಲಹೆಗೆ ಪ್ರತಿಕ್ರಿಯೆ ಕೊಟ್ಟಿರಲಿಲ್ಲ. ಆದರೆ ಪಾಟೀಲರೇ ಆಮೇಲೆ, 'ಡೋಂಟ್ ಮಿಸ್ ಅಂಡರ್‌ಸ್ಟ್ಯಾಂಡ್ ಮಿ ರಾವ್. ನಮ್ಮ ಕನ್ನಡ ವಿಭಾಗ ಚೆನ್ನಾಗಿಲ್ಲ ಅಂತ ನಾನು ಹೇಳುತ್ತಿಲ್ಲ. ನಿಮ್ಮಂತಹ ಇಂಗ್ಲಿಷ್ ಪ್ರಾಧ್ಯಾಪಕರ ನೆರವು ಪಡೆದು ಅದನ್ನು ನಮ್ಮ ರಾಜ್ಯದ ಒಂದು ಪ್ರತಿಷ್ಠಿತ ಕನ್ನಡ ಸಂಘವಾಗಿ ಮಾಡಬೇಕು ಅಂತ ನನಗೆ ಅನಿಸಲಿಕ್ಕೆ ಹತ್ತಿದೆ. ಹಿಂದೆ ಜಿ.ಪಿ. ರಾಜರತ್ನಂ ಸೆಂಟ್ರಲ್ ಕಾಲೇಜಿನಲ್ಲಿ, ಚಿ. ಶ್ರೀನಿವಾಸರಾಜು ಕ್ರೈಸ್ಟ್ ಕಾಲೇಜಿನಲ್ಲಿ ತುಂಬಾ ಚೆನ್ನಾಗಿ ಇಂಥದ್ದನ್ನು ನಡೆಸಿದ್ದಾರೆ ಎಂದು ಕೇಳಿಬಲ್ಲೆ. ಹಾಗೆ ರಾಂಪುರದ ಬಸವೇಶ್ವರ ಕಾಲೇಜಿನಲ್ಲೂ ಒಂದು ಒಳ್ಳೆ ಕನ್ನಡ ಸಂಘವೋ ಸಾಹಿತ್ಯ ಸಂಘವೋ ಇದೆ ಅಂತ ಜಗಜ್ಜಾಹೀರಾಗಲಿ ಎಂಬ ಕನಸು ನನ್ನದು!' ಎಂದಿದ್ದರು. ಆಗ ರಾಯರು ಅದಕ್ಕೆ 'ಆಗಬಹುದು ಸರ್' ಎಂದು ಒಪ್ಪಿಗೆ ಸೂಚಿಸಿ ಬಂದಿದ್ದರು.

ಆಮೇಲೆ ಪಾಟೀಲರ ಭೇಟಿಗೆ ಒಪ್ಪಿಗೆ ಪಡೆದ ರಾಯರು ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಮುದಿಗೌಡರನ್ನು ಕೂಡಿಕೊಂಡು ಪಾಟೀಲರನ್ನು ಭೇಟಿ ಮಾಡಿ, 'ನಮ್ಮ ಮೇಟಿ ಮುದಿಗೌಡರು ನಿಮ್ಮ ಸೂಚನೆಗೆ ಬಹಳ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಸರ್, ಅದನ್ನು ಹೇಳೋಣ ಅಂತ ಬಂದಿದ್ದೇವೆ' ಎಂದರು.

'ಎಸ್ ಮಿ. ಮುದಿಗೌಡರ' ಎಂದು ಬಸವೇಶ್ವರ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರನ್ನು ಸಂಬೋಧಿಸಿದ ಪಾಟೀಲರು, 'ನಿಮ್ಮಿಬ್ಬರಿಗೂ ನನ್ನದೊಂದು ಸೂಚನೆ ಇದೆ. ನಮ್ಮ ಕಾಲೇಜಿನಲ್ಲಿ ವರುಷಕ್ಕೆ ಕನಿಷ್ಠ ಮೂರು ಸಲ ನಾಡಿನ ಪ್ರಖ್ಯಾತ ವ್ಯಕ್ತಿಗಳನ್ನು ಕರೆಸಿ ಅವರಿಂದ ಒಂದು ಅದ್ಭುತವಾದ ಉಪನ್ಯಾಸವನ್ನು ಈ ವರ್ಷದಿಂದಲೇ ನೀವು ಏರ್ಪಡಿಸಬೇಕು. ಅವರಿಗೆ ಬಂದು ಹೋಗುವ ಪ್ರಯಾಣವೆಚ್ಚ, ಉಳಕೊಳ್ಳುವ ವ್ಯವಸ್ಥೆಯ ಎಲ್ಲಾ ಖರ್ಚನ್ನೂ ನಮ್ಮ ಟ್ರಸ್ಟ್ ನೋಡಿಕೊಳ್ಳುತ್ತದೆ. ನಿಮ್ಮ ಸಂಘದಲ್ಲಿ ಫಂಡ್ಸ್ ಇಲ್ಲವಾದರೆ ಅತಿಥಿಗಳ ಗೌರವ ಸಂಭಾವನೆಯನ್ನು ಕೂಡಾ ನಾವೇ ಕೊಡುತ್ತೇವೆ!' ಎಂದು ಇಬ್ಬರ ಮುಖ ನೋಡಿದ್ದರು.

ರಾಯರಿಗೆ ಖುಷಿಯಾಗಿತ್ತು. 'ವೆರಿಗುಡ್ ಐಡಿಯಾ ಸರ್, ಮೆನಿ ಥ್ಯಾಂಕ್ಸ್' ಎಂದು ಅವರು ತನ್ನ ಕೈಬೆರಳುಗಳ ನೆಟಿಕೆ ತೆಗೆದಿದ್ದರು. ಮುದಿಗೌಡರು ಎರಡೂ ಕೈಗಳನ್ನು ಜೋಡಿಸಿ, 'ತುಂಬಾ ಥ್ಯಾಂಕ್ಸ್ ಸರ್. ಖಂಡಿತ ಹಾಗೇ ಮಾಡ್ತೇವೆ. ಬಟ್ ಈ ವಿಶೇಷ ಕಾರ್ಯಕ್ರಮಕ್ಕೆ ಕನ್ವೀನರ್ ಆಗಿ ನಮ್ಮ ರಾಯರೇ ಇರಬೇಕು. ಅದನ್ನು ಅವರಿಗೆ ತಾವು ಹೇಳಬೇಕು' ಎಂದಿದ್ದರು.

'ಇಲ್ಲ ಅಂತ ಎಲ್ಲಿ ಹೇಳುತ್ತಾರೆ ಅವರು? ಏನ್ರೀ ರಾಯರೇ' ಎಂದು ಪಾಟೀಲರು ಶ್ರೀನಿವಾಸರಾಯರ ಮುಖ ನೋಡಿದ್ದರು.

'ಖಂಡಿತ ಸರ್, ನಾನು ನಡೆಸಿಕೊಡುತ್ತೇನೆ. ಬಟ್ ಒಂದು ರಿಕ್ವೆಸ್ಟ್ ಇದೆ ಸರ್. ತಾವು ಅಂಥ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸಬೇಕು'.

'ನೋಡೋಣ ನೋಡೋಣ. ನಿಮ್ಮ ಪ್ರಿನ್ಸಿಪಲ್ ಸಾಹೇಬರಿದ್ದಾರಲ್ಲ ಅವರಿಗೆ ಹೇಳಿ. ಅವಕಾಶ ಇದ್ದರೆ ನಾನು ಬಂದು ಕೇಳುಗನಾಗಿ ಇರುತ್ತೇನೆ' ಎಂದಿದ್ದರು ಪಾಟೀಲರು.

ಹೀಗೆ ಬಸವೇಶ್ವರ ಕಾಲೇಜಿನ ಕನ್ನಡ ಸಂಘದ ಆಶ್ರಯದಲ್ಲಿ ತಪ್ಪದೇ ವರುಷಕ್ಕೆ ಎರಡು ಮೂರು ಉಪನ್ಯಾಸಗಳು ನಡೆಯತೊಡಗಿದುವು. ಪಾಟೀಲರ ಒಪ್ಪಿಗೆ ಪಡೆದೇ ಈ ಕಾರ್ಯಕ್ರಮಗಳನ್ನು ರಾಯರು ಸಂಯೋಜಿಸುತ್ತಿದ್ದರು. ದೊಡ್ಡ ಉದ್ಯಮಿಯಾಗಿರುವ ಪಾಟೀಲರು ಕೆಲವೊಂದು ಸಂದರ್ಭದಲ್ಲಿ ಈ ಉಪನ್ಯಾಸ ಕಾರ್ಯಕ್ರಮಗಳ ಸಂದರ್ಭದಲ್ಲಿ ಇರುತ್ತಿರಲಿಲ್ಲ. ಅಂಥ ಸಂದರ್ಭಗಳಲ್ಲಿ ಆ ಭಾಷಣವನ್ನು ಅವರು ರೆಕಾರ್ಡ್ ಮಾಡಿಸಿ ಮನೆಗೆ ತರಿಸಿಕೊಂಡು ಮನೆಯ ಡ್ರಾಯಿಂಗ್ ರೂಮಿನಲ್ಲಿ ಕುಳಿತುಕೊಂಡು ಕೇಳುತ್ತಿದ್ದರು. ಆಮೇಲೆ ಖುಷಿಯಿಂದ ರಾಯರಿಗೆ ಫೋನು ಮಾಡಿ 'ವೆಲ್‌ಡನ್ ವೆಲ್‌ಡನ್' ಎಂದು ಹೇಳಲು ಮರೆಯುತ್ತಿದ್ದಿಲ್ಲ. ಇದರಿಂದಾಗಿ ಬಸವೇಶ್ವರ ಕಾಲೇಜಿನಲ್ಲಿ ರಾಯರ ಸ್ಥಾನಮಾನ ಏರಿತ್ತು ಮತ್ತು ಕಾಲೇಜ್ ಟ್ರಸ್ಟಿನ ಅಧ್ಯಕ್ಷರ ಜೊತೆ ರಾಯರ ಸಂಬಂಧ ಒಳ್ಳೆಯದಿದೆ ಎನ್ನುವುದು ರುಜುವಾತಾಗಿ ಅನೇಕರು ರಾಯರ ಬಗ್ಗೆ ಇನ್ನಿಲ್ಲದ ಗೌರವ ತೋರಿಸಹತ್ತಿದ್ದರು. ಸ್ವತಃ ಪ್ರಾಂಶುಪಾಲರು ಸಹ ಕಾಲೇಜ್ ಡೇ ಅಥವಾ ಇನ್ನಿತರ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸುವಾಗ ರಾಯರನ್ನು ಕರೆಸಿ, 'ಹೀಗೆ ಮಾಡಿದರೆ ಹೇಗೆ?' ಎಂದು ಕೇಳಹತ್ತಿದರು. ಅಥವಾ 'ಇದು ನನ್ನ ಯೋಚನೆ. ನಿಮ್ಮದು ಇದ್ದರೆ ಹೇಳಿ ಸರ್' ಎಂದು ಅಭಿಪ್ರಾಯ ಕೇಳಿ, 'ಎಸ್ ಹಾಗೇ ಮಾಡೋಣ' ಎಂದು ಅದನ್ನೇ ನಡೆಸಿಕೊಡುತ್ತಿದ್ದರು.

ಇದೆಲ್ಲ ಸತೀಶ ಕುಲಕರ್ಣಿಯವರಿಗೆ ಸ್ವಲ್ಪ ಸ್ವಲ್ಪ ಗೊತ್ತಿತ್ತು. ರಾಯರು ಸಾಂದರ್ಭಿಕವಾಗಿ ಈ ಕಾರ್ಯಕ್ರಮದ ಹಿನ್ನೆಲೆಯನ್ನು ವಿವರಿಸಿದಾಗ 'ಹೌದಾ?' ಎಂದು ಅಚ್ಚರ್ಯವ್ಯಕ್ತಪಡಿಸಿದ ಅವರು ಮನಸ್ಸಿನಲ್ಲೇ ಈ ಮನುಷ್ಯ 'ಅದ್ಭುತ ವ್ಯಕ್ತಿ' ಎಂದುಕೊಂಡರು.

ಬಸವೇಶ್ವರ ಕಾಲೇಜಿನಲ್ಲಿ ಖೈರೆ ಅವರ ಉಪನ್ಯಾಸ ತುಂಬ ಚೆನ್ನಾಗಿ ನಡೆಯಿತು. ಖೈರೆಯವರು 'ಬಯಲಿನ ಮಾತು ಬಾ' ಎಂದು ಬರೆದಿದ್ದ ಲೇಖನದ ಹಿನ್ನೆಲೆಯಲ್ಲಿ ಮಾತನಾಡಿದರು. ಅದು ಜನಪದ ಸಂಸ್ಕೃತಿ, ಮಹಾರಾಷ್ಟ್ರದ ಪರಿಸರ, ಮಿಸ್ರದ ದೈವಸ್ಥಾನ, ಮೊಹೆಂಜೊದಾರೋದ ಸಂಸ್ಕೃತಿ, ವೈದಿಕ ಸಂಪ್ರದಾಯಗಳನ್ನೆಲ್ಲ ತನ್ನ ತೆಕ್ಕೆಗೆ ತೆಗೆದುಕೊಂಡ ಉಪನ್ಯಾಸವಾಗಿತ್ತು. ಆ ಲೇಖನ ಆಗಲೇ ಮರಾಠಿಯಲ್ಲಿ ಪ್ರಕಟವಾದಾಗ